Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



Rtn. Dr. Stephanie Urchick
R. I. President



Rtn. MPHF CA Dev Anand
Dist. Governor



Rtn. Judith Mendonca
President



Rtn. Dr. Rajendra Shetty
Asst. Governor



Rtn. Bharath Shetty
Secretary



Rtn. Mahendr Shetty
Zonal Lieutenant



Rtn. Dr. Anulekha Bayari
Bulletin Editor

Volume 39 | Issue - 8 | 22nd August 2024

## “ವಿಷಮಯ ಆಹಾರದಿಂದ ವಿಷಮುಕ್ತ ಆಹಾರ ಪದ್ಧತಿ” ಎಡೆಗೆ

ಮುಖ್ಯ ಅತಿಥಿ :
ಶ್ರೀ ಗಿರೀಶ್ ಐತಾಳ್ ಯು. ಆರ್., ಮಂಗಳೂರು.
ಸಹ ಸಂಸ್ಥಾಪಕರು, 4Edge IT Solutions.

Time : 7.00 p.m.
Venue : Hotel Shivaprasad Grand, Kundapura

39th year of Service and Fellowship

## ವಾರದ ಸಭೆಯ ವರದಿ





ಈ ವಾರದ ಸಭೆಯು ತಾ. 15ರಂದು ರೋಟರಿ ಲಕ್ಷ್ಮೀ ನರಸಿಂಹ ಕಲಾಮಂದಿರದಲ್ಲಿ ಬೆಳಿಗ್ಗೆ 9.45 ಘಂಟೆಗೆ ಪ್ರಾರಂಭವಾಯಿತು. ಈ ಸಾಲಿನ ಜಿಲ್ಲಾ ಕಾರ್ಯಕ್ರಮ "ರಸ್ತೆ ಸುರಕ್ಷತೆ"ಯ ಅಂಗವಾಗಿ ವಿದ್ಯಾರ್ಥಿಗಳಿಗೆ ಮತ್ತು ವಾಹನ ಚಾಲಕರಿಗೆ ರಸ್ತೆ ಸುರಕ್ಷತೆಯ ಬಗ್ಗೆ ಜಾಗೃತಿ ಶಿಬಿರವಾಗಿ ಈ ಸಭೆಯಲ್ಲಿ ವಿಶೇಷ ಮಾಹಿತಿಯನ್ನು ನೀಡಲಾಯಿತು. ವೇದಿಕೆಯಲ್ಲಿ ಉಪಸ್ಥಿತರಿದ್ದ ಗಣ್ಯರನ್ನು, ಆಹ್ವಾನಿತರನ್ನು ಹಾಗೂ ನೆರೆದ ವಿದ್ಯಾರ್ಥಿ ಸಮೂಹವನ್ನು ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ಸ್ವಾಗತಿಸಿ, ಇಂದಿನ ಕಾರ್ಯಕ್ರಮದ ಅಗತ್ಯತೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ದೀಪ ಬೆಳಗಿ ಉದ್ಘಾಟಿಸಿದ ಪಿಡಿಜಿ ರೊ. ಅಭಿನಂದನ್ ಶೆಟ್ಟಿಯವರು ತಮ್ಮ ಭಾಷಣದಲ್ಲಿ 2018–19ರ ಜಿಲ್ಲಾ ಕಾರ್ಯಕ್ರಮದಲ್ಲಿ ತಾವು ಪ್ರಾರಂಭಿಸಿದ 'ರಸ್ತೆ ಸುರಕ್ಷತೆ'ಯ ಮಾಹಿತಿಗಳು ಇಂದಿಗೂ ಸಮಾಜಕ್ಕೆ ಅಗತ್ಯವಾಗಿದ್ದು, ಮುಂದಿನ ದಿನಗಳಲ್ಲಿ ದೇಶದ ಎಲ್ಲಾ ರೋಟರಿ ಕ್ಲಬ್‌ಗಳು ಇದರ ಬಗ್ಗೆ ವಿಶೇಷವಾದ ಅಭಿಯಾನವನ್ನು ಪ್ರಾರಂಭಿಸಲಿವೆ ಎಂದರು. ಇಂದು ಅಪಘಾತಗಳಲ್ಲಿ ಅಂಗಹೀನರಾಗಿ ಬದುಕುತ್ತಿರುವ ಪ್ರಜೆಗಳ ಸಂಖ್ಯೆ ಅಗಾಧವಾಗಿ ಬೆಳೆಯುತ್ತಿರುವುದರಿಂದ ರೋಟರಿಯ ಈ ಕಾರ್ಯಕ್ರಮ ಸ್ತುತ್ಯಾರ್ಹವೆಂದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಕುಂದಾಪುರ ಸಂಚಾರಿ ಠಾಣೆಯ ಮುಖ್ಯ ಠಾಣಾಧಿಕಾರಿಗಳಾದ ಶ್ರೀ ಪ್ರಸಾದ್ ಕುಮಾರ್‌ರವರು ಮಾತನಾಡಿ ರಸ್ತೆ ಅಪಘಾತಗಳು ನಡೆದಾಗ ಹತ್ತಿರದಲ್ಲಿರುವ ನಾಗರಿಕರು ಅಪಘಾತಕ್ಕೀಡಾದವರಿಗೆ ಕೂಡಲೇ ವೈದ್ಯಕೀಯ ಚಿಕಿತ್ಸೆಗಳು ಸಿಗಲು ಸಹಕರಿಸಬೇಕು. ಈಗ ಕಾನೂನಿನಲ್ಲಿ ತಿದ್ದುಪಡಿಯನ್ನು ತಂದಿರುವುದರಿಂದ ಪ್ರತ್ಯಕ್ಷದರ್ಶಿಗಳು ನ್ಯಾಯಾಲಯದಲ್ಲಿ ಸಾಕ್ಷಿ ಹೇಳಬೇಕಾಗಿಲ್ಲದಿರುವುದರಿಂದ ಧೈರ್ಯವಾಗಿ ಸಹಾಯ ಮಾಡಬೇಕು ಎಂದರು. ಸರಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಬಿ. ಜಿ. ರಾಮಕೃಷ್ಣರವರು ಮಾತನಾಡಿ 'ರೋಟರಿಯ ಈ ಶಿಬಿರದ ಮಾಹಿತಿಯನ್ನು ಪಡೆದ ವಿದ್ಯಾರ್ಥಿಗಳು ಸಂಚಾರಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು' ಎಂದು ಕರೆ ನೀಡಿದರು. ಅಸಿಸ್ಟೆಂಟ್ ಗವರ್ನರ್ ರೊ. ಬಿ. ರಾಜೇಂದ್ರ ಶೆಟ್ಟಿಯವರು ಶುಭಹಾರೈಸಿದರು. ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ನಿವೃತ್ತ ಜಿಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಾದ ಶ್ರೀ ವಿಶ್ವನಾಥ್ ನಾಯಕ್‌ರವರು ಪ್ರತಿ ರಸ್ತೆಗಳ ಇಕ್ಕೆಲಗಳಲ್ಲಿ ಸ್ಥಾಪಿಸಿರುವ ಚಿಹ್ನೆಗಳ ಬಗ್ಗೆ ವಿವರವಾಗಿ ತಿಳಿಸಿದರು. ಚಾಲಕರು ಕೈ ಸನ್ನೆಗಳ ಹಾಗೂ ಸಂಕೇತಗಳ ಮುಖಾಂತರವೂ ಚಾಲನೆಯನ್ನು ನಿಯಂತ್ರಿಸಬಹುದು ಎಂದರು. ಮುಂದಿನ 2 ವರ್ಷಗಳಲ್ಲಿ ಎಲ್ಲಾ ಕೂಡುರಸ್ತೆಗಳಲ್ಲಿ ಹಾಗೂ ಹೆದ್ದಾರಿಗಳಲ್ಲಿ ಕೃತಕ ಬುದ್ಧಿಮತ್ತೆಯ ಕ್ಯಾಮರಗಳು ಅಳವಡಿಸಲ್ಪಡುವುದರಿಂದ ಹಾಗೂ ಕಾನೂನು ಉಲ್ಲಂಘನೆಯಲ್ಲಿ ದಂಡದ ಪ್ರಮಾಣ ತೀವ್ರ ಹೆಚ್ಚಳವಾಗುವುದರಿಂದ ಪ್ರತಿಯೊಬ್ಬರೂ ಕಾನೂನನ್ನು ಗೌರವಿಸಲೇಬೇಕಾಗುತ್ತದೆ ಎಂದರು. ಸಂಚಾರಿ ನಿಯಮಗಳನ್ನು ಉಲ್ಲಂಘಿಸುವುದರಿಂದ ಆದ ಅಪಘಾತಗಳನ್ನು ಪ್ರಾತ್ಯಕ್ಷಿಕೆಯ ಮುಖಾಂತರ ಅವರು ತೋರಿಸಿದ್ದು, ವಿದ್ಯಾರ್ಥಿಗಳಲ್ಲಿ ಸಂಚಲನ ಮೂಡಿಸಲು ಯಶಸ್ವಿಯಾಯಿತು. ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ವಿದ್ಯಾರ್ಥಿಗಳಿಗೆ ಅತೀ ಅಗತ್ಯವಾದ ಈ ಕಾರ್ಯಕ್ರಮವನ್ನು ನಡೆಸಲು ಪ್ರೇರಣೆ ನೀಡಿದ ಪಿಡಿಜಿ. ರೊ. ಸದಾನಂದ ಚಾತ್ರರವರನ್ನು ಹಾಗೂ ಈ ಕಾರ್ಯಕ್ರಮದ ಸಂಪೂರ್ಣ ಪ್ರಾಯೋಜಕರಾದ 'ಅಪೋಲೋ ಟೈರ್ಸ್'ನ ಪ್ರಾದೇಶಿಕ ಮೆನೇಜರ್ ಶ್ರೀ ಸತೀಶ್‌ರವರನ್ನು ಸಂಪರ್ಕಿಸಿ, ಒಲಿಸಿದ ರೊ. ಸುಪ್ರೀತ್ ಚಾತ್ರರವರಿಗೆ ಧನ್ಯವಾದಗಳನ್ನು ತಿಳಿಸಿದರು. 'ಅಪೋಲೋ ಟೈರ್ಸ್'ನ ವತಿಯಿಂದ ಎಲ್ಲಾ ವಿದ್ಯಾರ್ಥಿಗಳಿಗೆ ಉಡುಗೊರೆಯನ್ನು ನೀಡಲಾಯಿತು. ಅಧ್ಯಾಪಕರಾದ ಶ್ರೀ ಉದಯ ಶೆಟ್ಟಿ ಕಾಳಾವರ ಇವರು ಇಡೀ ಕಾರ್ಯಕ್ರಮ ನಿರೂಪಿಸಿದರು. ಮಾಜಿ ಅಧ್ಯಕ್ಷರಾದ ರೊ. ವಿವಿಯನ್ ಕ್ರಾಸ್ಟೋರವರ ಧನ್ಯವಾದ ಸಮರ್ಪಣೆಯೊಂದಿಗೆ ಸಭಾ ಕಾರ್ಯಕ್ರಮವನ್ನು ಕೊನೆಗೊಳಿಸಲಾಯಿತು.



## ಅಭಿನಂದನೆಗಳು

ನಮ್ಮ ಕ್ಲಬ್ಬಿನ ಉತ್ಸಾಹೀ ಸದಸ್ಯರಾದ ರೊ ಡಾ. ರಾಜೇಶ್ ಬಾಯರಿಯವರು ಬೆಂಗಳೂರಿನ ಪರಿಮಳ ಗೆಳೆಯರ ಬಳಗ ನೀಡುವ ರಾಜ್ಯಮಟ್ಟದ ಪರಿಮಳ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಗ್ರಾಮೀಣ ಪ್ರದೇಶವಾದ ಆಲೂರಿನಲ್ಲಿ ಸ್ಥಾಪಿಸಿದ್ದ ತಮ್ಮ ಚಿತ್ರಕೂಟ ಚಿಕಿತ್ಸಾಲಯದ ಮುಖಾಂತರ ದೇಶ ವಿದೇಶಗಳ ಸಾವಿರಾರು ರೋಗಿಗಳಿಗೆ ಆಯುರ್ವೇದ ಚಿಕಿತ್ಸೆಯ ಮುಖಾಂತರ ನೀಡಿದ ಆರೋಗ್ಯ ಸೇವೆಯನ್ನು ಗುರುತಿಸಿ, ಈ ಗೌರವವನ್ನು ನೀಡಲಾಗಿದೆ. ರೊ. ಡಾ. ರಾಜೇಶ್ ಬಾಯರಿಯವರಿಗೆ ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ಪರವಾಗಿ ಅಭಿನಂದನೆಗಳು.

## ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮೋತ್ಸವ



ಆಗಸ್ಟ್ 15ರ ಗುರುವಾರದಂದು ಕುಂದಾಪುರದ ಗಾಂಧಿ ಮೈದಾನದ ರೋಟರಿ ಶತಾಬ್ಧಿ ವೇದಿಕೆಯಲ್ಲಿ ನಮ್ಮ ದೇಶದ 78ನೇ ಸ್ವಾತಂತ್ರ್ಯ ದಿನಾಚರಣೆಯನ್ನು ರೋಟರಿ ಕ್ಲಬ್ ಕುಂದಾಪುರ ದಕ್ಷಿಣ ಮತ್ತು ಇನ್ನರ್‌ವ್ಹೀಲ್ ಸದಸ್ಯೆಯರು ಜಂಟಿಯಾಗಿ ಆಚರಿಸಿದರು. ರೋಟರಿ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ಎಲ್ಲಾ ಸದಸ್ಯರ ಸಮ್ಮುಖದಲ್ಲಿ ಧ್ವಜಾರೋಹಣಗೈದು ಎಲ್ಲರೂ ರಾಷ್ಟ್ರಧ್ವಜಕ್ಕೆ ಗೌರವವನ್ನು ಸಲ್ಲಿಸಿ, ರಾಷ್ಟ್ರಗೀತೆಯನ್ನು ಹಾಡಿದರು. ನಂತರ ಸಂದೇಶವನ್ನು ನೀಡಿದ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು 'ಬ್ರಿಟೀಷರ ಆಡಳಿತದಿಂದ ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಬಲಿದಾನಗೈದ ಹೋರಾಟಗಾರರಿಗೆ ನಾವು ನಮನಗಳನ್ನು ಸಲ್ಲಿಸುವಾಗ, ಈಗ ದೇಶದ ರಕ್ಷಣೆ ಮಾಡುವ ಸೇನಾನಿಗಳನ್ನೂ ನಾವು ಸದಾಕಾಲ ಸ್ಮರಣೆ ಮಾಡಿಕೊಳ್ಳಬೇಕಾಗಿದೆ' ಎಂದರು. ಇನ್ನರ್‌ವೀಲ್ ಅಧ್ಯಕ್ಷೆ ರೊ. ಸುರೇಖ ಪುರಾಣಿಕ್‌ರವರು ಮಾತನಾಡಿ '78 ವರ್ಷಗಳಲ್ಲಿ ದೇಶ ಬಹಳಷ್ಟು ಪ್ರಗತಿಯನ್ನು ಸಾಧಿಸಿದರೂ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸಬೇಕಾಗಿದೆ' ಎಂದರು. ಇನ್ನರ್‌ವೀಲ್ ಕಾರ್ಯದರ್ಶಿ ಆ್ಯನ್ ಸುಮಾ ಪುತ್ರನ್‌ರವರು ಎಲ್ಲರಿಗೂ ಧನ್ಯವಾದವನ್ನು ನೀಡಿದರು. ಕಾರ್ಯಕ್ರಮದ ನಂತರ ಎಲ್ಲರಿಗೂ ಸಿಹಿಯನ್ನು ವಿತರಿಸಲಾಯಿತು.




ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ಅಧ್ಯಕ್ಷೆ ಮತ್ತು ಸದಸ್ಯರು ಹಾಗೂ ಇನ್ನರ್‌ವೀಲ್ ಅಧ್ಯಕ್ಷೆ ಮತ್ತು ಸದಸ್ಯೆಯರು ಸರಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳೊಂದಿಗೆ ಈ ವರ್ಷದ ಜಿಲ್ಲಾ ಕಾರ್ಯಕ್ರಮ 'ರಸ್ತೆ ಸುರಕ್ಷತೆ'ಯ ಬಗ್ಗೆ ರಸ್ತೆ ಜಾಗೃತಿ ಜಾಥಾವನ್ನು ನಡೆಸಲಾಯಿತು. ನಮ್ಮೊಂದಿಗೆ ಸುಮಾರು 450 ವಿದ್ಯಾರ್ಥಿಗಳು ರಸ್ತೆ ಸುರಕ್ಷತೆಯ ಬಗ್ಗೆ ಬ್ಯಾನರ್‌ಗಳು ಮತ್ತು ಘೋಷಣೆಗಳ ಮುಖಾಂತರ ಕುಂದಾಪುರದ ಪ್ರಮುಖ ರಸ್ತೆಗಳಲ್ಲಿ ಸ್ಕೂಲ್ ಬ್ಯಾಂಡಿನ ಮುಂದಾಳತ್ವದಲ್ಲಿ ಆಕರ್ಷಕವಾಗಿ ಜಾಥಾವನ್ನು ನಡೆಸಲಾಯಿತು. ಮೆರವಣಿಗೆಯ ಉದ್ದಕ್ಕೂ ವಿದ್ಯಾರ್ಥಿಗಳ ಶಿಸ್ತಿನ ಉಸ್ತುವಾರಿಯನ್ನು ಕಾಲೇಜಿನ ಎನ್.ಎಸ್.ಎಸ್. ಸಂಯೋಜಕಿ ಶ್ರೀಮತಿ ವನಿತಾರವರು ವಹಿಸಿ, ಪ್ರಶಂಸೆಗೆ ಪಾತ್ರರಾದರು. ಪ್ರಮುಖವಾಗಿ ವಿದ್ಯಾರ್ಥಿಗಳಿಗಾಗಿ ರೂಪಿಸಲಾದ ಈ ಜಾಥಾವು ವಿದ್ಯಾರ್ಥಿಗಳ ಉತ್ಸಾಹದಿಂದ ರಸ್ತೆಯ ಇಕ್ಕೆಲಗಳಲ್ಲಿ ನೆರೆದಿದ್ದ ಸಾವಿರಾರು ಸಾರ್ವಜನಿಕರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿತ್ತು. ಜಾಥಾದ ಕೊನೆಗೆ 450 ವಿದ್ಯಾರ್ಥಿಗಳಿಗಾಗಿ ಉಪಾಹಾರವನ್ನು ಏರ್ಪಡಿಸಲಾಗಿತ್ತು.





ಅಗಸ್ಟ್ 15ರಂದು ನಡೆದ ವಾರದ ಸಭೆಯಲ್ಲಿ ಮಾಜಿ ಅಧ್ಯಕ್ಷ ರೊ. ಸತ್ಯನಾರಾಯಣ ಪುರಾಣಿಕ್ ರವರು ತಮ್ಮ ಕುಟುಂಬದ ಸವಿ_ತಾ ಫೌಂಡೇಶನ್ ನ ಮುಖಾಂತರ ನಮ್ಮ ಮಾಜಿ ಸದಸ್ಯರಾದ ದಿವಂಗತ ರೊ. ಕೆ. ಪಿ. ಭಟ್‌ರವರ ಸವಿ ನೆನಪಿಗಾಗಿ ಬೆಲ್ಲಾಳದ ರಶ್ಮಿತಾ ಪೂಜಾರಿಯವರ ಕೋರಿಕೆಯ ಮೇರೆಗೆ ಸ್ವಉದ್ಯೋಗಕ್ಕಾಗಿ ಹೊಲಿಗೆ ಯಂತ್ರವನ್ನು ಉಚಿತವಾಗಿ ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ಪಿಡಿಜಿ ರೊ. ಅಭಿನಂದನ್ ಶೆಟ್ಟಿಯವರು, RCC Tallurನ ಅಧ್ಯಕ್ಷರಾದ ಯೋಗೀಶ್ ಆಚಾರ್ಯ, ರೊ. ಸುರೇಖಾ ಪುರಾಣಿಕ್, ರೊ. ಔಝುಲಿನ್ ರೆಬೆಲ್ಲೋ ಹಾಗೂ ಗಣ್ಯರು ಉಪಸ್ಥಿತರಿದ್ದರು.

ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ನಮ್ಮ ಕ್ಲಬ್ಬಿನ ವತಿಯಿಂದ ಕುಂದಾಪುರದ ಬೋರ್ಡ್ ಹೈಸ್ಕೂಲ್ ಮತ್ತು ಸರಕಾರಿ ಪದವಿಪೂರ್ವ ಕಾಲೇಜಿನ 650 ವಿದ್ಯಾರ್ಥಿಗಳಿಗೆ ಲಡ್ಡುಗಳನ್ನು ವಿತರಿಸಲಾಯಿತು.

